Minister in her reply at (b) has stated that there is no Primary School in the following villages of my Constituency.

1 Nandur Tanda
2 Itaga Khandla Tanda
3 Revu Naik Tanda
4 Gardi Tanda
5 Sadam Tanda
6 Hind Tanda and
7 Kadani Tanda.

These are not the villages of Tanda in my Constituency. Those village are not at all there in my Constituency. That is my point. I don't know this reply was printed here. All these place do not come under Chitapur Constituency at all. I don't know how such information is furnished by the officials. I request the Hon'ble Minister to furnish correct reply after ascertaining the information once again. As such I request the Chair to hold over the question.

SMT. NAGAMMA C. KESHAVAMURTHY ('inister of State for rimary and Secondary Education).—Sir, since the hon. member is not satisfied with the answer furnished, this question may be held over.

MR. SPEAKER.—The question is held over.

Acquisition of Land in Yaraganavi Village of Savadrthi Tr/uk.

532 SRI G.K. TAKKED (Parasagad).—Will the Minister for Rural Dev lopment and Panchayat Raj be pleased to state.—

(a) the reasons for not giving possession of the land to the Panchayat so far, though the Government had taken possession of the Gramatana Land of Yaraganavi Village in Savadathi taluk of Belgaum district 20 years back;

(b) if so, whether the Government would take immediate action in this behalf?

SRI B, RAMAIAH.—Minister for Rural Development and Panch ayatRaj

(a) Lands in Survey Number 241, 250 and 251 of Yaraganavl Village were acquired in the year 1958-59 and Notification No. RDH 322 ALVP 60 was also issued. So far, Panchayat has not taken possession of land as there are no relevant documents.

(b) Steps would be taken to acquire the land in question by initiating fresh acquisition proceedings.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ೧೯೫೮-೫೯ನೇ ಸಾಲಿನಲ್ಲಿ ಎರಗಣವಿ ಗ್ರಾಮದಲ್ಲಿ ಜಮೀನನ್ನು ಸರ್ಕಾರ ವಶಪಡಿಸಿಕೊಂಡಿರುವುದಾಗಿಯೂ ಮತ್ತು ಸರ್ಕಾರದಲ್ಲಿ ಸರಿಯಾದ ದಾಖಲೆಗಳಿಲ್ಲದ ಕಾರಣ ಪಂಚಾಯಿತಿಯ ವಶಕ್ಕೆ ಇನ್ನೂ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ದಾಖಲೆಗಳನ್ನು ಸರಿಯಾಗಿಡದ ತಹಸೀಲ್ದಾರ್ ಅಥವಾ ಅಸಿಸ್ಟೆಂಟ್ ಕಮೀಷನರ್ ಅಥವಾ ಜಿಲ್ಲಾಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಈ ಕಾಗದ ಪತ್ರಗಳನ್ನು ಮುಚ್ಚಿಡುವ ಪ್ರಯತ್ನ ಮಾಡಿದ ಅಥವಾ ಕಳವು ಮಾಡಿದ ಯಾವ ಸರ್ಕಾರಿ ಅಧಿಕಾರಿಗಳ ಮೇಲೆ ಮತ್ತು ಸಂಬಂಧಪಟ್ಟ ಭೂಮಾಲೀಕರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬೇಗಾನೆ ರಾಮಯ್ಯ.—೧೯೫೮ರಲ್ಲಿ ಈ ಭೂಮಿಯನ್ನು ಗ್ರಾಮ ಪಂಚಾಯಿತಿಯವರು ವಹಿಸಿಕೊಳ್ಳಬೇಕಾಗಿತ್ತು. ಆ ಗ್ರಾಮದಲ್ಲಿ ೭೦೦ ಜನರಿದ್ದಾರೆ. ಅವರಲ್ಲಿ ವಸತಿಹೀನರು ಎಷ್ಟು ಮಂದಿ ಇದ್ದಾರೆಂಬುದನ್ನು ಗುರುತಿಸಿ ಅವರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕಾಗಿದೆ. ಅದಕ್ಕೆ ೨೩ ಎಕರೆ ಜಾಗವನ್ನು ಕೊಟ್ಟು ಅವರಿಗೆ ಮನೆಗಳನ್ನು ಕಟ್ಟಿಸಿಕೆ ಇಡುವಂಥ ವ್ಯವಸ್ಥೆ ಮಾಡಿದ್ದೇವೆ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಎಲ್ಲರಿಗೂ ಮನೆಗೆ ಜಾಗ ಒದಗಿಸಲು ಇನ್ನೂ ೧೫ ಎಕರೆ ಜಾಗವನ್ನು ವಶಪಡಿಸಿಕೊಳ್ಳಬೇಕಾಗಿದೆ. ಇದನ್ನೆಲ್ಲ ನಾವು ಪರಿಶೀಲಿಸಿ ಇನ್ನೂ ಹೆಚ್ಚಿನ ಜಾಗವನ್ನು ಅಕ್ವೈರ್ ಮಾಡಿಕೊಳ್ಳಬೇಕೆಂಬುದು ಕಂಡುಬಂದರೆ ಬೇರೆ ಜಮೀನನ್ನು ಸಹ ಸ್ವಾಧೀನಪಡಿಸಿಕೊಳ್ಳಲು ಸಿದ್ಧರಿದ್ದೇವೆ. ೧೯೫೯ರಲ್ಲಿ ಆರ್ಡರ್ ಆದದ್ದನ್ನು ೨ ವರ್ಷದೊಳಗೆ ಸ್ವಾಧೀನಕ್ಕೆ ತೆಗೆದುಕೊಳ್ಳದೆ ಅದು ಲ್ಯಾಪ್ಸ್ ಆಗಿದೆ. ಪುನಃ ಪ್ರೊಸೀಡಿಂಗ್ಸ್ ತೆಗೆದುಕೊಂಡು ಬೇಡಿಕೆ ಇರುವಷ್ಟು ಮಾಡುವುದಕ್ಕೆ ಸಿದ್ಧರಿದ್ದೇವೆ. ಅಲ್ಲಿ ಎಷ್ಟು ಮಂದಿ ವಸತಿ ಹೀನರಿದ್ದಾರೆಂಬ ಮಾಹಿತಿಯನ್ನು ತಕ್ಷಣ ಒದಗಿಸಿದರೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟು ಅವರಿಗೆ ವಸತಿ ಮಾಡಿಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ಅಲ್ಲಿರತಕ್ಕ ಜಮೀನನ್ನು ವಶಪಡಿಸಿಕೊಳ್ಳಬೇಕೆಂದರೆ ಅದಕ್ಕೆ ಅನೇಕ ಸಮಸ್ಯೆಗಳು ಬರಂತತ್ತವೆ. ಆದರೂ ನಾವು ಲ್ಯಾಂಡ್ ಅಕ್ವಿಷಿಷನ್ ಆಕ್ಟಿಗೆ ೧೯೭೨ರಲ್ಲಿ ಒಂದು ತಿದ್ದುಪಡಿತಂದು ಜನತಾ ಮನೆಗಳನ್ನು ಕಟ್ಟುವ ಸಲುವಾಗಿ ಜಮೀನನ್ನು ಅಕ್ವೈರ್ ಮಾಡುತ್ತಿದ್ದೇವೆ. ಅದೇ ಪ್ರಕಾರ ಇಲ್ಲಿಯೂ ಸಹ ಮಾಡುವುದಕ್ಕೆ ಬರುತ್ತದೆ.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಯನ್ನು ಅರ್ಥ ಮಾಡಿಕೊಂಡಿಲ್ಲ. ಸರ್ಕಾರ ಯಾವ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಊರಿಗೆ ಒಂದು ಗ್ರಾಮಠಾಣ ಮಾಡಬೇಕೆಂಬ ಸದುದ್ದೇಶದಿಂದ ಇತ್ತೋ, ಆ ಪ್ರಕರಣ ಸಂಪೂರ್ಣವಾಗಿ ಮುಗಿದು ಯಾವ ಕಾಲಕ್ಕೆ ಅದನ್ನು ಪಂಚಾಯಿತಿಗೆ ಹ್ಯಾಂಡ್ ಓವರ್ ಮಾಡಬೇಕಾಗಿತ್ತೋ ಆಗ ಯಾವುದೋ ಒಂದು ಕೈ ಅದರೊಳಗೆ ಅದರ ರೂಪ ಬದಲಾಯಿತು. ಒಂದು ಊರಿನಲ್ಲಿ ಕೇವಲ ಮನೆಗಳನ್ನು ಕಟ್ಟಿಸಿಕೊಡಲಿಕ್ಕೆ ಅಷ್ಟೇ ಜಮೀನನ್ನು ವಶಪಡಿಸಿಕೊಳ್ಳುವುದು ಅಲ್ಲ, ಗ್ರಾಮಠಾಣ ಅಂದರೆ ದನಕರುಗಳಿಗೆ ಅಲ್ಲಿ ಮೇಯುವುದಕ್ಕೆ ಜಾಗ ಇರಬೇಕು. ಮುಂದುವೆ ಮುಂತಾದ ಸಮಾರಂಭಗಳನ್ನು ಮಾಡುವುದಕ್ಕೆ ಅಲ್ಲಿ ಜಾಗ ಇರಬೇಕು. ಯಾವುದಾದರೂ ಆಟ-ನೋಟಗಳನ್ನು ನೋಡುವುದಕ್ಕೆ ಜಾಗ ಇರಬೇಕು. ಆದರೆ ಆ ಊರಿನಲ್ಲಿ ೧೦ ಎಕರೆ ಜಾಗ ಕೂಡ ಗ್ರಾಮಠಾಣಕ್ಕಾಗಿ ಇಲ್ಲ. ಸಾರ್ವಜನಿಕ ಕ್ಷೇತ್ರಕ್ಕೆ ಬೇಕಾಗುವ ಸ್ಥಳವನ್ನು ನೀಡದೆ ಮಾನ್ಯ ಮಂತ್ರಿಗಳು ಯಾವುದೋ ಒಂದು ಉತ್ತರವನ್ನು ಮುಚ್ಚಿಡುವ ಸಲುವಾಗಿ ಕಾಗದ ಪತ್ರಗಳು ಕಳೆದಿವೆ ಎಂದರೆ ಆಗುವುದಿಲ್ಲ. ಸರ್ಕಾರದ ಅಧಿಕಾರಿಗಳು ಕಾಗದ ಪತ್ರಗಳನ್ನು ಕಳೆದಿದ್ದಾರೆಂದರೆ ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಆ ಭೂಮಿಯ ಕಂದಾಯವನ್ನು ಏತಕ್ಕೆ ಕಟ್ಟಿಲ್ಲ? ಈ ಪ್ರಶ್ನೆ ಬಹಳ ಗಂಭೀರವಾದುದು. ಇದೇ ರೀತಿಯಲ್ಲಿ ಅಧಿಕಾರಿಗಳು ವರ್ತನೆ ಮಾಡಿದರೆ, ಆಕ್ಷೇಪಣೆಗಳು ಅಷ್ಟೇ ಅಲ್ಲ, ಗಂಭೀರವಾದ ಆರೋಪವನ್ನು ಸರ್ಕಾರ ಹೊರಬೇಕಾಗುತ್ತದೆ. ಆ ಭೂಮಿಯನ್ನು ಏತಕ್ಕೆ ಇನ್ನೂ ಪಂಚಾಯಿತಿಯವರಿಂ ವಶಪಡಿಸಿಕೊಂಡಿಲ್ಲ?

ಶ್ರೀ ಬೇಗಾನೆ ರಾಮಯ್ಯ.—ನನಗೆ ಬಂದಿರತಕ್ಕ ವರದಿ ಪ್ರಕಾರ ಸಾಕಷ್ಟು ದಾಖಲಾತಿಗಳು ಸರ್ಕಾರದಲ್ಲಿವೆ. ಆದರೆ ಗ್ರಾಮ ಪಂಚಾಯಿತಿಯವರು ತಮ್ಮ ವಶಕ್ಕೆ ಆ ಜಮೀನನ್ನು ತೆಗೆದುಕೊಂಡಿಲ್ಲ ಮಾನ್ಯ ಸದಸ್ಯರು ಆ ಜಮೀನನ್ನು ಗ್ರಾಮಠಾಣಗೋಸ್ಕರ ಅಂದರೆ ಗ್ರಾಮಾಭಿವೃದ್ಧಿ ಕಾರ್ಯಗಳಿಗೋಸ್ಕರ

ಉಪಯೋಗಿಸಬೇಕೆಂದು ಹೇಳಿದ್ದಾರೆ. ಆದುದರಿಂದ ಅದನ್ನು ತೀವ್ರವಾಗಿ ಪರಿಶೀಲಿಸಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್‌ನ್ನು ಮುಂದುವರಿಸಿ ಆದಷ್ಟು ಜಾಗ್ರತೆ ಅದನ್ನು ವಶಪಡಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಂ. ಎಂ. ನಧಾಫ್,—ಆ ಜಮೀನನ್ನು ಯಾವ ಉದ್ದೇಶಕ್ಕಾಗಿ ಆಕ್ವೈರ್ ಮಾಡಿತ್ತು. ಯಾವಾಗ ಅವಾರ್ಡ್ ಪಾಸ್ ಆಯಿತು? ೨೦ ವರ್ಷವಾದರೂ ಆ ಉದ್ದೇಶ ಈಡೇರದಿರುವುದರಿಂದ ಅದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಬೇಗಾನೆ ರಾಮಯ್ಯ.—ಅದರ ವಿವರಗಳನ್ನು ಕೊಟ್ಟಿದ್ದೇನೆ. ಅದು ನನ್ನ ಉತ್ತರದಲ್ಲಿದೆ.

ಶ್ರೀ ಜಿ.ಕೆ. ತಕ್ಕೇಡ್.—ಯಾವಾಗ ಸ್ವಾಧೀನಕ್ಕೆ ತೆಗೆದುಕೊಂಡರು ಎಂಬುದು ಇಲ್ಲ.

ಶ್ರೀ ಬೇಗಾನೆ ರಾಮಯ್ಯ.—ಗ್ರಾಮ ಪಂಚಾಯಿತಿಯವರು ಸ್ವಾಧೀನಕ್ಕೆ ತೆಗೆದುಕೆ ಇಂಡಿಲ್ಲ.

ಶ್ರೀ ಜಿ.ಕೆ. ತಕ್ಕೇಡ್.—ಆ ಜಮೀನನ್ನು ಯಾರ ಕಡೆಯಿಂದ ತೆಗೆದುಕೊಂಡಿರಿ, ಯಾವಾಗ ಅವಾರ್ಡ್ ಪಾಸ್ ಆಯಿತು ಈ ವಿವರಗಳನ್ನು ಸ್ಪಷ್ಟವಾಗಿ ನೀಡಬೇಕು, ಸುಮ್ಮನೆ ಅಧಿಕಾರಿಗಳು ಬರೆದುಕೊಟ್ಟದನ್ನು ತಾವು ಇಲ್ಲಿ ಓದಬೇಡಿ.

SRI A. LASKSHMISAGAR.—Sir, it is stated that lands were acquired but Panchayats did not take possession. I want to know when acquisition took place and how they were terminated. Why the village panchayat did not take possession of the land. I request the Hon. Minister to furnish all the details in this connection.

ಶ್ರೀ ಬೇಗಾನೆ ರಾಮಯ್ಯ.—ಆ ಜಮೀನನ್ನು ಆಕ್ವೈರ್ ಮಾಡಿರತಕ್ಕವರು ಬೈಲಹೊಂಗಲದ ಅಸಿಸ್ಟೆಂಟ್ ಕಮೀಷನರ್‌ರವರು. ಅವರ ಹತ್ತಿರ ಪೊಸಿಷನ್ ತೆಗೆದುಕೊಳ್ಳಬೇಕೆಂದಾಗ ಸಾಕಷ್ಟು ದಾಖಲಾತಿಗಳು ಪಂಚಾಯಿತಿಗೆ ಸಿಗಲಿಲ್ಲ. ಟ್ರಜರಿಗೆ ಹಣ ಕಟ್ಟಿದ್ದಾರೆ. ದಾಖಲಾತಿಗಳು ಸರ್ಕಾರದಲ್ಲಿವೆ, ಆದರೆ ಅವರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡಿಲ್ಲ. ಅದು ಎಗಡು ವರ್ಷವಾದರೆ ಲ್ಯಾಪ್ಸ್ ಆಗುತ್ತದೆ. ಆದ್ದರಿಂದ ಪುನ: ಹೊಸ ಪ್ರೊಸೀಡಿಂಗ್ಸ್ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಜಿ. ಕೆ. ತಕ್ಕೇಡ್.—ಪಂಚಾಯಿತಿಯವರು ಎಷ್ಟು ಹಣ ಕಟ್ಟಿದ್ದಾರೆ?

(ಉತ್ತರವಿಲ್ಲ)

SEI M.M. NADAFH.—The object with which the lands were acquired 20 years back has not been served by not giving possession of the same to the village panchayat. May I know the reasons.....

ಶ್ರೀ ಬೇಗಾನೆ ರಾಮಯ್ಯ.—ಇಲ್ಲಿ ನನಗೆ ಬಂದಿರತಕ್ಕ ಮಾಹಿತಿಗಳ ಆಧಾರದ ಮೇಲೆ ಹೇಳಿದ್ದೇನೆ ಹೆಚ್ಚು ವಿವರಣೆಗಳು ಬೇಕಾದರೆ ಈ ಪ್ರಶ್ನೆಯನ್ನು ತಡೆಹಿಡಿಯಬಹುದು.

MR. DEPUTY SPEAKER.— The question is held over.

Facilities to the passengers in the prizate Bue-stand at Mandya

660 SRI M.S. ATMANANDA (Mandya). -Will the Minister for Housing and Urban Development be pleased to state.—

(a) Whether they are aware that the Bus Stand constructed for private buses in Mandya City is in a busy place;

(b) if so, whether they are also aware that due to inadequate facilities, the passengers are put to lot of difficulties

(c) the steps taken by them to overcome such difficulties?